# ಬೆಂಗಳೂರು ನಮ್ಮ ಸೆಕೆಂಡ್ ಹೋಮ್



ದಕ್ಷಿಣ ಕೊರಿಯಾದಿಂದ ಬಂದ ರಾ ಬಿಯಾಂಗ್ ಗಿ ಮತ್ತು ಕಿಮ್ ಜಿಯಾಂಗ್ ಹೀ ದಂಪತಿ

ತಮ್ಮ ಸ್ವಂತ ದೇಶ ಬಿಟ್ಟು ಭಾರತಕ್ಕೆ, ಅದರಲ್ಲೂ ಬೆಂಗಳೂರಿಗೆ ಬರುವ ಬಹುತೇಕ ಎಲ್ಲ ವಿದೇಶೀಯರು ಇಲ್ಲಿಗೆ ಬಂದುದಕ್ಕೆ ಹೇಳುವ ಕಾರಣ ಒಂದೇ. ಇಲ್ಲಿ ಸಿಗುವ ಉದ್ಯೋಗಾವಕಾಶಗಳು. ಜತೆಗೆ ಹೊಸ ಉದ್ಯಮಕ್ಕೆ ಸಿಗುವ ಪ್ರೋತ್ಸಾಹ, ಉತ್ತೇಜನ. ದಕ್ಷಿಣ ಕೊರಿಯಾದಿಂದ ಬೆಂಗಳೂರಿಗೆ ಬಂದ ರಾ ಬಿಯಾಂಗ್ ಗಿ ಮತ್ತು ಕಿಮ್ ಜಿಯಾಂಗ್ ಹೀ ದಂಪತಿ ಕೂಡ ಇಲ್ಲಿಗೆ ಬಂದದ್ದು ಉತ್ತಮ ಉದ್ಯೋಗದ ನಿರೀಕ್ಷೆಯಲ್ಲೇ.

ಕಳೆದ ಆರು ವರ್ಷಗಳ ಹಿಂದೆ ಈ ಕುಟುಂಬ ಮೊದಲು ಕೊಚ್ಚಿನ್‌ಗೆ ಬಂದಿತ್ತು. ಅಲ್ಲಿ ಎರಡು ವರ್ಷ ಉದ್ಯಮದಲ್ಲಿ ಕಳೆದ ಮೇಲೆ ಕಳೆದ ನಾಲ್ಕು ವರ್ಷಗಳಿಂದ ತಮ್ಮ ಕಾರ್ಯಸ್ಥಾನ ಮತ್ತು ವಾಸ ಸ್ಥಾನ ಎರಡನ್ನೂ ಬೆಂಗಳೂರಿಗೆ ಸೀಮಿತಗೊಳಿಸಿದ್ದಾರೆ; ಜತೆಗೆ ಕಾಯಂ ಆಗಿ ಇಲ್ಲಿಯೇ ನಿಲ್ಲುವ ಇರಾದೆಯನ್ನೂ ವ್ಯಕ್ತಪಡಿಸುತ್ತಾರೆ.

‘ನಮ್ಮ ಮಗಳು ಬೆಂಗಳೂರಿನ ಕೆನಡಿಯನ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಓದುತ್ತಿದ್ದಾಳೆ. ಮಗ ಸದ್ಯ ಚೀನಾದ ಶಾಂಘೈನಲ್ಲಿ ಓದುತ್ತಿದ್ದಾನೆ. ಇಲ್ಲಿ ಉದ್ಯೋಗಾವಕಾಶ ಹೆಚ್ಚು ಎಂಬುದನ್ನು ಕೇಳಿ ಇಲ್ಲಿಗೆ ಬಂದೆವು. ನಮ್ಮದೇ ಆದ ‘ಇಂಪೋರ್ಟ್–ಎಕ್ಸ್‌ಪೋರ್ಟ್’ ಕಂಪೆನಿ ಆರಂಭಿಸಿದ್ದೇವೆ. ಇಲ್ಲಿಗೆ ಬಂದ ಮೇಲೆ ನಮ್ಮ ನಿರ್ಧಾರ ಸರಿಯಾಗಿಯೇ ಇದೆ ಅನಿಸ್ತಾ ಇದೆ’ ಎಂದು ಹೇಳುತ್ತಾರೆ ಕಿಮ್ ಜಿಯಾಂಗ್.

ಹಾಗೆ ನೋಡಿದರೆ ಕಿಮ್ ತನ್ನ ಗಂಡನಿಗೆ ಉದ್ಯಮದಲ್ಲಿ ಸಹಕರಿಸುವ ಜತೆಗೆ ಸ್ಟಾರ್ ಹೋಟೆಲ್ ಒಂದರಲ್ಲಿ ಶೆಫ್ ಆಗಿಯೂ ಕೆಲಸ ಮಾಡುತ್ತಾರೆ. ಆ ಹೋಟೆಲ್‌ನಲ್ಲಿ ಇತ್ತೀಚೆಗೆ ನಡೆದ ಕೊರಿಯನ್ ಫೆಸ್ಟಿವಲ್‌ನಲ್ಲಿ ಭಾಗವಹಿಸಿದ್ದು ಅದು ಬಹಳ ಚೆನ್ನಾಗಿತ್ತಂತೆ. ಬೇರೆ ಬೇರೆ ದೇಶಗಳ ಶೆಫ್‌ಗಳನ್ನೂ ಭೇಟಿ ಆಗುವ ಅವಕಾಶ ದೊರೆಯಿತಂತೆ.

ಕೊರಿಯನ್ ಅಡುಗೆ ಬಹಳ ರುಚಿಯಾಗಿರುತ್ತದೆ. ಈ ಸವಿಯನ್ನು ಇಲ್ಲಿಯವರಿಗೆ ಉಣಬಡಿಸುವ ಸಲುವಾಗಿ ‘ಕೊರಿಯನ್ ಹೋಟೆಲ್’ ಒಂದನ್ನು ತೆರೆಯುವ ಉದ್ದೇಶ ಈ ದಂಪತಿಗಿದೆ. ಆದರೆ ಅಲ್ಲಿಯ ಆಹಾರ ಕ್ರಮ, ಅಡುಗೆಗಳಿಗೆ ಬೇಕಾದ ಕೆಲವೊಂದು ಸಾಮಗ್ರಿಗಳು (ಇನ್‌ಗ್ರೀಡಿಯಂಟ್ಸ್) ಇಲ್ಲಿ ಸಿಗುತ್ತಿಲ್ಲ ಎಂಬ ಕೊರಗೂ ಇವರಿಗಿದೆ.

ಭಾರತಕ್ಕೆ ಬಂದ ಹೊಸದರಲ್ಲಿ ಸುಮಾರು ಎರಡು ವರ್ಷ ಈ ಕುಟುಂಬ ಕೊಚ್ಚಿನ್‌ನಲ್ಲಿತ್ತು. ‘ಕೊಚ್ಚಿನ್‌ನ ಹವಾಮಾನ ಹಿಡಿಸಲಿಲ್ಲ. ಹೀಗಾಗಿ ಬೆಂಗಳೂರಿಗೆ ಬಂದೆವು’ ಎನ್ನುತ್ತಾರೆ ಈ ದಂಪತಿ.

ಕೊರಿಯಾದ ಹವಾಮಾನದ ಬಗ್ಗೆ ಬೆಳಕು ಚೆಲ್ಲುವ ಅವರು, ‘ಕೊರಿಯಾದಲ್ಲಿ ತುಂಬ ಥಂಡಿ, ಶೀತ ಇರುತ್ತದೆ. ಚಳಿಗಾಲದಲ್ಲಿ ಉಷ್ಣಾಂಶ ತೀರಾ ಕಡಿಮೆ ಇದ್ದು ಸಹಿಸಲು ಅಸಾಧ್ಯವಾದ ಚಳಿ ಇರುತ್ತದೆ. ಆದರೆ ಬೆಂಗಳೂರಿನ ವಾತಾವರಣ ಅತ್ಯಂತ ಆಪ್ಯಾಯಮಾನ. ಅತ್ತ ತೀರಾ ಬಿಸಿಯೂ ಅಲ್ಲ; ತೀರಾ ಚಳಿಯೂ ಅಲ್ಲದ ಮನಕ್ಕೆ ಮುದ ನೀಡುವ ಹವಾಮಾನ ಇಲ್ಲಿಯದು’ ಎಂದು ಹೇಳುತ್ತಾರೆ.

‘ಕೊಚ್ಚಿನ್‌ನಲ್ಲಿ ಸುಮಾರು 8–10 ಕೊರಿಯನ್ ಕುಟುಂಬದವರಿದ್ದರೆ ಬೆಂಗಳೂರಿನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕೊರಿಯನ್ ಕುಟುಂಬ ವಾಸವಾಗಿದೆ’ ಎಂಬ ಅಂಕಿ ಅಂಶ ನೀಡುತ್ತಾರೆ ರಾ ಬಿಯಾಂಗ್.

‘ದಕ್ಷಿಣ ಕೊರಿಯಾದಲ್ಲಿ ‘ಫುಲ್ ಮೂನ್ ಫೆಸ್ಟಿವಲ್’ ಅನ್ನು ಅದ್ಧೂರಿಯಾಗಿ ಆಚರಿಸಲಾಗುತ್ತದೆ. ಈ ಹಬ್ಬದಲ್ಲಿ ಹಿರಿಯರು ಬಟ್ಟೆಬರೆಗಳ ಉಡುಗೊರೆ ನೀಡುತ್ತಾರೆ. ಎಲ್ಲರ ಮನೆಗಳಲ್ಲಿ ಹಬ್ಬದ ಸಂಭ್ರಮ. ರುಚಿ ರುಚಿ ಅಡುಗೆ, ಊಟ ಮನೆ ಮಂದಿಯೆಲ್ಲ ಒಟ್ಟಿಗೆ ಕುಳಿತು ಊಟ ಮಾಡುವುದು, ನಿಜಕ್ಕೂ ಥ್ರಿಲ್ಲಿಂಗ್ ಎಕ್ಸ್‌ಪೀರಿಯನ್ಸ್’ ಎನ್ನುವ ಜಿಯಾಂಗ್, ಈಗ ಇಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಅದೇ ರೀತಿ ಆಚರಿಸಿ ಸಂಭ್ರಮಿಸುತ್ತೇವೆ’ ಎನ್ನುತ್ತಾರೆ.

## ಭಾಷಾ ಸಂಸ್ಕೃತಿ

‘ಇಲ್ಲಿನ ಬಹುಭಾಷಾ ಸಂಸ್ಕೃತಿ ಎಲ್ಲ ವಿದೇಶೀಯರ ಮೆಚ್ಚುಗೆಗೆ ಪಾತ್ರವಾಗುತ್ತಿದೆ. ಇಂಗ್ಲಿಷ್, ಹಿಂದಿ, ಕನ್ನಡ, ಮಲಯಾಳಂ, ತೆಲುಗು, ತಮಿಳು ಮುಂತಾದ ಭಾಷೆಗಳನ್ನಾಡುವ ಮಂದಿ ಇಲ್ಲಿ ಕಾಣಸಿಗುತ್ತಾರೆ. ವ್ಯವಹಾರಕ್ಕೆ ಇಂಗ್ಲಿಷ್ ಇಲ್ಲಿ ಚೆನ್ನಾಗಿ ಬಳಕೆಯಾಗುತ್ತಿದೆ ಎಂಬುದು ಸಮಾಧಾನದ ಸಂಗತಿ. ಕನ್ನಡ ಕಲಿಯಲು ಆಸೆಯಿದೆ, ಆದರೆ ಕನ್ನಡಕ್ಕಿಂತಲೂ ಹಿಂದಿಯ ಮೇಲೆ ಹೆಚ್ಚಿನ ವ್ಯಾಮೋಹ; ಜೊತೆಗೆ ಕಲಿಯಲೂ ಸುಲಭ’ ಎಂಬ ಅಭಿಪ್ರಾಯ ಈ ಕೊರಿಯನ್ ದಂಪತಿಯದು.

ಕಳೆದ ಆರು ವರ್ಷಗಳಿಂದ ಭಾರತದಲ್ಲಿ ಇರುವ ಇವರು ಈಗಾಗಲೇ ದೇಶದ ಅನೇಕ ಪ್ರವಾಸಿ ತಾಣಗಳನ್ನು ನೋಡಿ ಬಂದಿದ್ದಾರೆ. ಮುಖ್ಯವಾಗಿ ದೆಹಲಿ, ಶಿಮ್ಲಾ, ಜೈಪುರ, ಹಿಮಾಲಯದ ಸುತ್ತಮುತ್ತಲಿನ ಪ್ರದೇಶ, ಮೈಸೂರು, ಊಟಿ ನೋಡಿ ಪುಳಕಗೊಂಡಿದ್ದಾರೆ.

ಸದ್ಯಕ್ಕೆ ಕೊರಿಯಾಕ್ಕೆ ಮತ್ತೆ ಹೋಗುವ ಯೋಚನೆ ಇಲ್ಲವಂತೆ. ‘ಬೆಂಗಳೂರು ನಮ್ಮ ಸೆಕೆಂಡ್ ಹೋಮ್’ ಎಂದು ನಗುತ್ತಾರೆ ಈ ದಂಪತಿ.

★ **ಅವನೀಶ್**